# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE : 11/03/2020

# ಅಶ್ಲೀಲ ಪದ ಪ್ರಯೋಗದ ಹಕ್ಕುಚ್ಯುತಿ ವ್ಯರ್ಥಾಲಾಪ

11/3/2020

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

'ಸ್ಪೀಕರ್ ಸ್ಥಾನ ದುರ್ಬಳಕೆ ಮಾಡಿ ನಮ್ಮ ಭವಿಷ್ಯ ಹಾಳುಗೆಡವಿದರು' ಎಂಬ ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ಆರೋಪಕ್ಕೆ ಸಂಬಂಧಿಸಿ ಉಂಟಾದ ವಿವಾದ ತಾರಕಕ್ಕೇರಿದ್ದು, ವಿಧಾನಸಭೆ ಕಲಾಪ ಗದ್ದಲದಲ್ಲಿ ಅಂತ್ಯವಾದ ಘಟನೆ ನಡೆಯಿತು.

ಮಂಗಳವಾರ ಸದನದಲ್ಲಿ ಡಾ. ಸುಧಾಕರ್ ಮತ್ತು ಮಾಜಿ ಸ್ಪೀಕರ್ ರಮೇಶ್ ಕುಮಾರ್ ನಡುವಿನ ವಾಗ್ವಾದ ತಾರಕಕ್ಕೇರಿತು. ಪ್ರತಿಪಕ್ಷ ಮತ್ತು ಆಡಳಿತ ಪಕ್ಷದ ಶಾಸಕರ ನಡುವಿನ ವಾದ ವಿವಾದಗಳಿಂದ ಕಲಾಪಕ್ಕೆ ಅಡ್ಡಿಯುಂಟಾದ ಪರಿಣಾಮ ಕಲಾಪವನ್ನು ಮೊಟಕುಗೊಳಿಸಿ ಬುಧವಾರಕ್ಕೆ ಮುಂದೂಡಲಾಯಿತು.

ಸಚಿವ ಸುಧಾಕರ್ ಅವರು ತಮ್ಮ ಭಾಷಣದಲ್ಲಿ ತುರ್ತು ಪರಿಸ್ಥಿತಿಯ ಪ್ರಸ್ತಾಪ ಮಾಡುತ್ತಿದ್ದಂತೆ ಆಕ್ಷೇಪ ವ್ಯಕ್ತಪಡಿಸಿದ ಮಾಜಿ ಸ್ಪೀಕರ್ ಹಾಗೂ ಕಾಂಗ್ರೆಸ್ ಶಾಸಕ ರಮೇಶ್ ಕುಮಾರ್, ನೀವು ತುರ್ತು ಪರಿಸ್ಥಿತಿಯ ಬಗ್ಗೆ ಮಾತನಾಡಬೇಡಿ. ನಿಮಗೆ ಆ ಅರ್ಹತೆಯಿಲ್ಲ. ನೀವು ಪಕ್ಷಾಂತರ ಮಾಡಿದವರು. ತುರ್ತು ಪರಿಸ್ಥಿತಿ ಬಗ್ಗೆ ಯಡಿಯೂರಪ್ಪ ಮಾತನಾಡಿದರೆ ನಾನು ತಲೆಬಾಗಿ ಕೇಳುತ್ತೇನೆ ಎಂದರು. → 4

## ಮನವೊಲಿಕೆ ಯತ್ನ

ರಮೇಶ್ ಕುಮಾರ್ ಅವರ ನಡೆಯಿಂದ ಬೇಸರಗೊಂಡ ಹಿರಿಯ ನಾಯಕರು ರಮೇಶ್ ಕುಮಾರ್ ಅವರನ್ನು ಮನವೊಲಿಸುವ



ಪ್ರಯತ್ನ ನಡೆಸಿದರು. ಕಾಂಗ್ರೆಸ್ ನಾಯಕರ ಮನವೊಲಿಕೆಗೆ ಬಗ್ಗದ ರಮೇಶ್ ಕುಮಾರ್ ಅವರನ್ನು ಸ್ಪೀಕರ್ ಕೊಠಡಿ ಯಲ್ಲಿ ಮನವೊಲಿಕೆ ಮಾಡುವ ಪ್ರಯತ್ನ ನಡೆಯಿತು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಗೃಹ ಸಚಿವ ಎಸ್.ಆರ್. ಬೊಮ್ಮಾಯಿ ಅವರು ಮನವೊಲಿಕೆ ಮಾಡುವ ಪ್ರಯತ್ನ ನಡೆಸಿದರು. ರಾಜೀನಾಮೆ ನಿರ್ಧಾರದಲ್ಲಿ ದುಡುಕಬೇಡಿ ಎಂದು ಮನವೊಲಿಕೆ ಮಾಡಲಾಯಿತು. ಹಕ್ಕುಚ್ಯುತಿ ಮಂಡನೆಗೆ ಅವಕಾಶ ಕೋರಿ ಕಾಂಗ್ರೆಸ್‌ನ ಹಿರಿಯ ನಾಯಕರೆಲ್ಲ ರಮೇಶ್ ಕುಮಾರ್ ಬೆನ್ನಿಗೆ ನಿಂತ ಹಿನ್ನೆಲೆಯಲ್ಲಿ ರಮೇಶ್ ಕುಮಾರ್ ರಾಜೀನಾಮೆ ನಿರ್ಧಾರದಿಂದ ತಾತ್ಕಾಲಿಕವಾಗಿ ಹಿಂದೆ ಸರಿದಿದ್ದಾರೆ ಎನ್ನಲಾಗಿದೆ.



ನಾನು ಹಕ್ಕುಚ್ಯುತಿ ನಿರ್ಣಯ ಮಂಡನೆಗೆ ನೋಟಿಸ್ ಕೊಟ್ಟಿದ್ದೇನೆ. ಪ್ರಸ್ತಾವನೆಗೆ ಅವಕಾಶ ಮಾಡಿಕೊಡಿ. ಈ ಸದನಕ್ಕೆ ಗೌರವ ಕೊಡಬೇಕು. ಸ್ಪೀಕರ್ ಪೀಠಕ್ಕೆ ಗೌರವ ಕೊಡಬೇಕು ಎಂಬ ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ. ಸುಧಾಕರ್ ಅವಾಚ್ಯ ಶಬ್ದ ಬಳಕೆ ಮಾಡಿದ್ದಾರೆ. ನೀವು ನಮ್ಮ ರಕ್ಷಣೆಗೆ ಬರಬೇಕು.

- ಸಿದ್ದರಾಮಯ್ಯ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

ದಿನಾಂಕ 11/03/2020

# ಅಶ್ಲೀಲ ಪ್ರಯೋಗದ ಹಕ್ಕುಚ್ಯುತಿ ವ್ಯರ್ಥಾಲಾಪ

← ಮೊದಲ ಪುಟದಿಂದ

ಇದರಿಂದ ಕೆರಳಿದ ಸುಧಾಕರ್, ಸ್ಪೀಕರ್ ಪೀಠದಿಂದ ನಮಗೆ ಅನ್ಯಾಯವಾಗ್ತಿದೆ. ನಾನು ಸೇರಿ 17 ಜನರ ಬದುಕನ್ನು ನಾಶ ಮಾಡುವ ಪ್ರಯತ್ನ ನಡೆದಿತ್ತು. ಅನ್ಯಾಯ ಆಗಿದ್ದವರಲ್ಲಿ ನಾನೂ ಒಬ್ಬ. ನಮ್ಮ ವಿರುದ್ಧ ಷಡ್ಯಂತ್ರ ಮಾಡಲಾಯಿತು ಎಂದು ನೇರ ಆರೋಪ ಮಾಡಿದರು. ಸುಧಾಕರ್ ಹೇಳಿಕೆಗೆ ಕಾಂಗ್ರೆಸ್ ಸದಸ್ಯರಿಂದ ತೀವ್ರ ಆಕ್ಷೇಪ ವ್ಯಕ್ತವಾಗುವ ಮೂಲಕ ಸ್ಪೀಕರ್ ಪೀಠ ಮತ್ತು ಆದೇಶಕ್ಕೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಯಿತು.

ಸುಧಾಕರ್ ಕ್ಷಮೆಗೆ ಆಗ್ರಹಿಸಿ ಬಾವಿಗಿಳಿದು ಪ್ರತಿಭಟನೆ ನಡೆಸಿದ ರಮೇಶ್ ಕುಮಾರ್ ಮತ್ತು ಕೆಲ ಕಾಂಗ್ರೆಸ್ ಶಾಸಕರು, ಸ್ಪೀಕರ್ ತೀರ್ಪಿನ ವಿರುದ್ಧ ಮಾತನಾಡುವ ಮೂಲಕ ಸ್ಪೀಕರ್ ಪೀಠಕ್ಕೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಧಿಕ್ಕಾರ ಕೂಗಿ, ಕ್ಷಮೆ ಕೇಳುವಂತೆ ಒತ್ತಾಯ ಮಾಡಿದರು. ಸದನದಿಂದ ಹೊರನಡೆದ ರಮೇಶ್ ಕುಮಾರ್ ರಾಜೀನಾಮೆಗೆ ಮುಂದಾಗುವ ಮೂಲಕ ಹೈಡ್ರಾಮಾ ಸೃಷ್ಟಿಸಿದರು. ಕಾಂಗ್ರೆಸ್‌ನ ಹಿರಿಯ ನಾಯಕರು ಅವರ ಮನವೊಲಿಸುವ ಪ್ರಯತ್ನ ನಡೆಸಿದರು.

**ಪರಸ್ಪರ ಹಕ್ಕುಚ್ಯುತಿ:** ವಿಧಾನಸಭೆ ಕಲಾಪ ಆರಂಭ ಆಗುತ್ತಿದ್ದಂತೆ ಹಕ್ಕುಚ್ಯುತಿ ನಿರ್ಣಯ ಮಂಡನೆಗೆ ಕಾಂಗ್ರೆಸ್ ನಾಯಕರು ತೀರ್ಮಾನಿಸಿದರು. ಸ್ಪೀಕರ್ ಕಚೇರಿಯಲ್ಲಿ ನಡೆದ ಸಭೆ ಬಳಿಕ ಕಾಂಗ್ರೆಸ್ ನಾಯಕರು ಈ ತೀರ್ಮಾನಕ್ಕೆ ಬಂದರು. ಸ್ಪೀಕರ್ ಪೀಠಕ್ಕೆ ಸಚಿವ ಸುಧಾಕರ್ ಅವಮಾನ ಮಾಡಿದ್ದಾರೆ. ಹಾಗಾಗಿ ಸುಧಾಕರ್ ಕ್ಷಮೆ ಕೇಳಬೇಕು ಎಂದು ಪಟ್ಟು ಹಿಡಿದ ಕಾಂಗ್ರೆಸ್ ನಾಯಕರು ಹಕ್ಕುಚ್ಯುತಿ ಮಂಡನೆಗೆ ಅವಕಾಶ ನೀಡುವಂತೆ ಕೋರಿಕೊಂಡರು. ಕಾಂಗ್ರೆಸ್ ನಾಯಕರು ತಮ್ಮ ಬೆನ್ನಿಗೆ ನಿಂತ ಹಿನ್ನೆಲೆಯಲ್ಲಿ ರಮೇಶ್ ಕುಮಾರ್ ರಾಜೀನಾಮೆ ನಿರ್ಧಾರದಿಂದ ತಾತ್ಕಾಲಿಕವಾಗಿ ಹಿಂದೆ ಸರಿದರು. ಹಕ್ಕುಚ್ಯುತಿಗೆ ಅವಕಾಶ ನೀಡುವ ಸಂಬಂಧ ರಮೇಶ್ ಕುಮಾರ್-ಸುಧಾಕರ್ ನಡುವಿನ ವಾಕ್ಸಮರದ ವಿಡಿಯೊ ಕ್ಲಿಪ್ಪಿಂಗ್ ಪರಿಶೀಲನೆಗೆ ಸ್ಪೀಕರ್ ಕಾಗೇರಿ ತೀರ್ಮಾನಿಸಿದ್ದಾರೆ. ವಿಧಾನಸಭೆ ಕಲಾಪ ಮುಂದೂಡಿದ ಬಳಿಕ ಇಬ್ಬರ ನಡುವೆ ಅವಾಚ್ಯ ಶಬ್ದಗಳ ಬಳಕೆಯಾಗಿದೆ. ಹೀಗಾಗಿ, ಯಾವುದೇ ನಿರ್ಧಾರ ತೆಗೆದುಕೊಳ್ಳುವುದು ಕಷ್ಟವಾಗಲಿದ್ದು, ಕಾನೂನು ತಜ್ಞರು ಮತ್ತು ಸಂವಿಧಾನ ತಜ್ಞರೊಂದಿಗೂ ಸ್ಪೀಕರ್ ಸಮಾಲೋಚನೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ. ಆಡಳಿತ ಪಕ್ಷದ ಸದಸ್ಯರು ಸುಧಾಕರ್ ಬೆನ್ನಿಗೆ ನಿಂತಿದ್ದು, ಸುಧಾಕರ್ ಕೂಡ ಹಕ್ಕುಚ್ಯುತಿ ಮಂಡನೆಗೆ ಮುಂದಾಗಿದ್ದಾರೆ.